<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>
ಸಿ.ಸಿ. ನಂ. 9125-2022

ಸಿಡಬ್ಲೂ -7 ಪಿಡಬ್ಲೂ-5

ಸಾಕ್ಷಿದಾರರ ಹೆಸರು : ಪ್ರಶಾಂತಶೆಟ್ಟಿ
ತಂದೆಯ ಹೆಸರು : ಲೇಟ್ ಎಂ .ಕೆ ಶೆಟ್ಟಿ
ವಯಸ್ಸು : 52 ವರ್ಷ
ಕೆಲಸ : ಖಾಸಗಿ ನೌಕರಿ
ವಾಸ : ಬೆಂಗಳೂರು

<u>ಸಾಕ್ಷಿಯನ್ನು ದಿನಾಂಕಃ 16-06-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನನಗೆ 1 ನೇ ಆರೋಪಿ ಗೊತ್ತಿಲ್ಲ. 2021 ರಲ್ಲಿ ಬಾಡಿಗೆಗೆ ಮನೆ ಬೇಕು ಎಂದು ನಿರಂಜನ್ ರವರಿಗೆ ಹುಡುಕಲು ಹೇಳಿದ್ದೆ. ಆಗ ಅವರು ಶ್ರೀಕಂಠ ಲೇಔಟ್ ನಲ್ಲಿ 3 ನೇ ಮಹಡಿಯಲ್ಲಿರುವ ಮನೆಯನ್ನು ತೋರಿಸಿದ್ದರು. ಆ ಮನೆಗೆ ಬಾಡಿಗೆ ಜಾಸ್ತಿ ಆಗಿದ್ದರಿಂದ ನೋಡೋಣ ಎಂದು ಹೇಳಿ ನಂತರ ಬೇಡ ಎಂದು ಹೇಳಿದ್ದೆ. ಮನೆ ನೋಡಲು ಹೋದ ಸಮಯದಲ್ಲಿ ಸೆಕ್ಯೂರಿಟಿಗೆ ನನ್ನ ಮೊಬೈಲ್ ನಂಬರ ಕೊಟ್ಟಿರುತ್ತೇನೆ. ಸಮಸ್ಯೆ ಇದೆ ಎಂದು ಹೇಳಿದ್ದೆ. ಈ ವಿಚಾರವಾಗಿ ಪೋಲೀಸರಿಗೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಮನೆ ಯಾರ ಮಾಲೀಕತ್ವದ್ದು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ</u>

ನನ್ನ ಹೇಳಿಕೆಯ ಪ್ರಕಾರ ಮನೆಯನ್ನು ರಂಜಿತ ತೋರಿಸಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಗೆ ಸದರಿ ಮನೆ ಸೇರಿತ್ತು ಎಂದರೆ ಸರಿಯಲ್ಲ. ಮಾವದಲಾಂಬಿಕೆಯವರಿಗೆ ಸೇರಿತ್ತು ಎಂದು ಬರೆಯಲಾಗಿದೆ ಎಂದರೆ ಸರಿ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u> ಇಲ್ಲಾ

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ